'...'

'ನಾನು ಹೋದಾಗ ತುಂಬಾ ಅತ್ತುಬಿಟ್ಟ ಕಣೋ. ಕೈ ಹಿಡಿದುಕೊಂಡು ಒಂದು ಮಾತು ನಡೆಸಿಕೊಡಬೇಕು, ಆಗೊಲ್ಲ ಅನ್ನಬಾರದು ಎಂದು ಕೇಳಿದ.'

'ನಮಗೆ ಎಷ್ಟು ಸಹಾಯ ಮಾಡಿದಾರೆ, ಆಗಲಿ ಎನ್ನಬೇಕಿತ್ತು.'

'ಅಂದೆ.'

'ಏನಂತೆ?'

'ಅವರ ಅತ್ತಿಗೆಗೆ ಮದುವೆಗೆ ಬಂದ ಮೂವರು ಹೆಣ್ಣುಮಕ್ಕಳಿರುವುದು ನಿನಗೂ ಗೊತ್ತಿರಬೇಕು. ಆಕೆಗೆ ಅದೇ ಚಿಂತೆಯಂತೆ. 'ಇಷ್ಟು ದಿನ ನಾನಿದ್ದೆ ಅಂತ ಆಕೆಗೆ ಧೈರ್ಯ ಇತ್ತು' ಎಂದು ವೆಂಕಟರಾಂ ಮತ್ತೆ ಅಳಲು ಶುರು ಮಾಡಿದ.'

'ಹಿರಿಯ ಹುಡುಗಿ ನಿನ್ನ ವಯಸ್ಸಿನವಳೇ. ಧನಲಕ್ಷ್ಮಿ ಅಂತ ಹೆಸರು. ಎಸ್ಸೆಸ್ಸೆಲ್ಸಿ ಓದಿದಾಳೆ. ನನಗೆ ಕಾಫಿ ತಂದುಕೊಟ್ಟ ರೀತಿಯೇ ಹೇಳುತ್ತೆ ಋಜು ಸ್ವಭಾವದವಳು ಅಂತ. ನೀನು ತಾನೆ ಎಷ್ಟು ದಿನ ಈ ಹೋಟೆಲ್ ಊಟ ತಿಂದುಕೊಂಡು ಇರ್ತೀಯಾ? ನೋಡು, ದೋಸೆ ತಿಂದು ಅರ್ಧ ಗಂಟೆ ಆಗಿಲ್ಲ ಆಗಲೆ ಒಳಗೆ ಉರಿ ಎತ್ತಿಕಳ್ತು. ನೀನು ಸ್ಟೌ ಇಟ್ಕೊಂಡು, ಸಾಂಬಾರು ತಂದುಕೊಂಡು ಎಷ್ಟು ದಿನ ಇವೆಲ್ಲಾ?!'

ನನಗೆ ಏನು ಹೇಳಬೇಕೊ ಹೊಳೆಯಲಿಲ್ಲ.

ಮಾವನೇ ಮುಂದುವರಿಸಿದ: 'ನಾಡಿದ್ದು ಭಾನುವಾರ ಅವರ ಮನೆಗೆ ಹೋಗೋಣ. ಆದಷ್ಟು ಬೇಗ ಆಗಿಬಿಡಲಿ. ಸಾಯುವ ಈ ಹೊತ್ತಲ್ಲಿ ಅವನಿಗೆ ತುಸು ನೆಮ್ಮದಿಯಾದರೂ ಸಿಗಲಿ. ಇನ್ನೊಂದು ಮಾತೆಂದರೆ ನಿನಗೆ ಈ ಕೆಲಸ ಸಿಗೋಕೆ ಅವನೇ ಕಾರಣ ಅಂತ ನಿನಗೆ ಗೊತ್ತಿದೆ. ಆದರೆ ಇದಕ್ಕಾಗಿ ಅವನು ಮ್ಯಾನೇಜ್‌ಮೆಂಟ್ ಜೊತೆ ಎಷ್ಟು ಬಡಿದಾಡಿದ ಅಂತ ನಿನಗೆ ಗೊತ್ತಿದೆ. ಋಣ ಇಟ್ಕೋಬಾರ್ದು ಕಣೋ! ಉಪಜಾತಿಗಳಲ್ಲಿ ವ್ಯತ್ಯಾಸ ಇದ್ದರೂ ಈಗಿನ ಕಾಲದಲ್ಲಿ ಏನಾದರೂ ಪರಿಹಾರ ಇರುತ್ತೆ. ನಾವು ಯೋಚಿಸಿ ಆಗಿದೆ' ಎಂದು ಮಾತು ಮುಗಿಸಿದರು.

ಬೇಡ ಬೇಡ ಎಂದರೂ ಮಾವ ಬಿಲ್ಲು ತಾವೇ ತೆಗೆದುಕೊಂಡರು.

ಭಾಗವತ ಸುಬ್ಬರಾಯ ರಸ್ತೆಯ ತಿರುವಿನ ತನಕ ಇಬ್ಬರೂ ಮಾತಾಡದೆ ನಡೆದುಬಂದೆವು. ತಿರುವಿನಲ್ಲಿ ಮಾವ ನಡಿಗೆ ನಿಧಾನಿಸಿ ಹೇಳಿದರು: 'ಇನ್ನೆರಡು ಸಂಗತಿ ಹೇಳೋದು ಮರೆತೆ. ನಿಮ್ಮ ಅಪ್ಪ ಸತ್ತು ಹೋದನಂತೆ; ಮೂರು ದಿನದ ಹಿಂದೆ. ಸಾಯುವಾಗ ನಿನ್ನ ತುಂಬಾ ನೆನೆಸುತ್ತಿದ್ದನಂತೆ. ಮಾರ್ಕೆಟ್‌ನಲ್ಲಿ ನಿಮ್ಮೂರಿನವರೊಬ್ಬರು ಸಿಕ್ಕಿ ಹೇಳಿದರು. ಎರಡನೆಯದು: ನಿಮ್ಮ ಮಾಮಿ ತಾಯಿ ಆಗ್ತಾಯಿದಾಳೆ.' ಮಾವ ಇದನ್ನು ಹೇಳುವಾಗ ನವಿರಾಗಿ ನಾಚಿದರು. ಅವರ ದಪ್ಪ ಬಿಳಿ ಮೀಸೆ ನಕ್ಕಿದ್ದು ಸ್ಪಷ್ಟವಾಗಿ ಕಾಣಿಸಿತು.

## ಆನಂದ್ ಗೋಪಾಲ್

ಕತೆಗಾರ ಆನಂದ್ ಗೋಪಾಲ್ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕೋಡಿಹಳ್ಳಿ ಗ್ರಾಮದವರು. ಬೆಂಗಳೂರು ವಿ.ವಿ.ಯಿಂದ ಕನ್ನಡ ಸಾಹಿತ್ಯದಲ್ಲಿ ಎಂ.ಎ.ಪದವಿ. ಕತೆಗಾರ ಕೆ. ಸತ್ಯನಾರಾಯಣ ಅವರ ಕತೆಗಳ ಮೇಲೆ ಪಿಎಚ್.ಡಿ. ಪ್ರಜಾವಾಣಿಯ ದೀಪಾವಳಿ ಕಥಾಸ್ಪರ್ಧೆಯಲ್ಲಿ ಎರಡು ಬಾರಿ ಬಹುಮಾನ. ಬೇರೆ ಬೇರೆ ಪತ್ರಿಕೆ–ಮಾಸಿಕಗಳಲ್ಲಿ ಅನೇಕ ಕತೆಗಳು ಪ್ರಕಟವಾಗಿವೆ. ಪ್ರಸಕ್ತ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರು.